Matter taken up before Lok Adalath. Both the parties and their counsels present and filed Joint memo. Heard, perused satisfied. Both the parties submits they are ready to compromise the suit. For orders kept by

I Addl. Civil Judge and JMFC.,
K.R.Pet

**ಜಂಟಿ ರಾಜಿ ಅರ್ಜಿಯ ಮೇರೆಗೆ ಆದೇಶ**

ಈ ದಾವೆಯನ್ನು ವಾದಿಯರು ಮತ್ತು ಪ್ರತಿವಾದಿಯರು ಕುಟುಂಬದ ಹಿತೈಸಿಗಳ, ಗ್ರಾಮದ ಹಿರಿಯರು ನೀಡಿರುವ ಸಲಹೆ, ಸೂಚನೆಯಂತೆ ಮತ್ತು ವಕೀಲರು ನೀಡಿರುವ ಸಲಹೆಯ ಮೇರೆಗೆ ಈ ದಾವೆಯನ್ನು ಈ ಕೆಳಕಂಡಂತೆ ರಾಜೀ ಮಾಡಿಕೊಂಡಿರುತ್ತಾರೆ.

2. ದಾವಾ ಷೆಡ್ಯೂಲ್ ಆಸ್ತಿ ವಾದಿಯರ ಪಿತ್ರಾರ್ಜಿತವಾದ ಆಸ್ತಿಯಾಗಿರುತ್ತದೆ. ಎಂಬುದನ್ನು ದಾವಾ ಷೆಡ್ಯೂಲ್ ಆಸ್ತಿಯಲ್ಲಿ ವಾದಿಯರು ಸಂಪೂರ್ಣ ಮಾಲೀಕರಾಗಿ ಸ್ವಾಧೀನತೆಯನ್ನು ಹೊಂದಿರುತ್ತಾರೆ ಎಂಬುದನ್ನು, ದಾವಾ ಷೆಡ್ಯೂಲ್ ಆಸ್ತಿಗೆ ಸಂಬಂಧಿಸಿದಂತೆ ಮೂಲ ದಾಖಲಾತಿಗಳು ವಾದಿಯರ ತಂದೆಯ ಹೆಸರಿನಲ್ಲಿ ಇದ್ದವು ಎಂಬುದನ್ನು, ದಾವಾ ಷೆಡ್ಯೂಲ್ ಆಸ್ತಿಯನ್ನು ವಾದಿಯರ ತಂದೆ ಬೋರೇಗೌಡರವರು ಚಿಕ್ಕಳಲೆ ಗ್ರಾಮದ ಅಮಾಸೇಗೌಡರ ಮಗ ಸತ್ತಿಗೌಡ ರವರಿಗೆ ದಿನಾಂಕ: 22-06-1964 ರಲ್ಲಿ ಭೋಗ್ಯ ಮಾಡಿದ್ದರು ಬಿಡುಗಡೆ ಎಂಬುದನ್ನ, ದಿನಾಂಕ: 02-03-

1970 ರಲ್ಲಿ ಭೋಗ್ಯ ಮಾಡಿಸಿಕೊಂಡಿರುತ್ತಾರೆ ಎಂಬ ಎಲ್ಲಾ ಅಂಶಗಳನ್ನ ಪ್ರತಿವಾದಿ ದಾಖಲೆಗಳನ್ನು ನೋಡಿ ಒಪ್ಪಿಕೊಂಡಿರುತ್ತಾರೆ.

3) ದಾವಾ ಷೆಡ್ಯೂಲ್ ಆಸ್ತಿಯ ಮೇಲೆ ಪ್ರತಿವಾದಿಗೆ ಯಾವುದೇ ರೀತಿಯ ಹಕ್ಕು ಅಧಿಕಾರ ಹಾಗೂ ಸ್ವಾಧೀನತೆ ಇರುವುದಿಲ್ಲ ಎಂಬುದನ್ನ ಪ್ರತಿವಾದಿ ಒಪ್ಪಿಕೊಂಡಿರುತ್ತಾರೆ. ದಾವಾ ಷೆಡ್ಯೂಲ್ ಆಸ್ತಿಯಲ್ಲಿ ವಾದಿಯರು ಸಂಪೂರ್ಣ ಮಾಲೀಕರಾಗಿ ಸ್ವಾಧೀನತೆಯನ್ನು ಹೊಂದಿರುತ್ತಾರೆ ಎಂಬುದನ್ನ ಪ್ರತಿವಾದಿ ಒಪ್ಪಿಕೊಂಡಿರುತ್ತಾರೆ. ದಾವಾ ಷೆಡ್ಯೂಲ್ ಆಸ್ತಿಯಲ್ಲಿ ಸ್ವಾಧೀನತೆಯನ್ನು ಹೊಂದಿರುವ ವಿಷಯ ಬಾಜುದಾರರಿಗೂ ಹಾಗೂ ಗ್ರಾಮಸ್ಥರಿಗೂ ತಿಳಿದಿರುವ ವಿಷಯವಾಗಿರುತ್ತದೆ ಪ್ರತಿವಾದಿಯರು ಒಪ್ಪಿಕೊಂಡಿರುತ್ತಾರೆ. ದಾವಾ ಷೆಡ್ಯೂಲ್ ಆಸ್ತಿಗೆ ಸಂಬಂಧಿಸಿದಂತೆ ಪ್ರತಿವಾದಿಯ ತಂದೆ ನಾಗರಾಜಯ್ಯರವರು ಇವರ ಮಕ್ಕಳಾದ ಮಹೇಶ, ಮೋಹನ ಮತ್ತು ಪ್ರತಿವಾದಿರವರುಗಳೆಲ್ಲರೂ ಸೇರಿಕೊಂಡು ವಾದಿಯರ ಮಾಲೀಕತ್ವಕ್ಕೆ ಒಳಪಟ್ಟಿರುವ ಹಾಗೂ ಸ್ವಾಧೀನಾನುಭವದಲ್ಲಿರುವ ದಾವಾ ಷೆಡ್ಯೂಲ್ ಆಸ್ತಿಯನ್ನ ಸೇರಿಸಿಕೊಂಡು ದಿನಾಂಕ: 27-12-2008 ರಂದು ಪಂಚಾಯಿತಿ ಪಾಲುಪಟ್ಟಿಯಲ್ಲಿ ಪ್ರತಿವಾದಿಗೆ ಮತ್ತು ಈತನ ಸಹೋದರರಿಗೆ ತಿಳಿಯದೆ ಮಾಡಿಕೊಂಡಿರುವ ವಿಭಾಗಪತ್ರವಾಗಿದ್ದು, ದಿನಾಂಕ 27-12-2008 ರ ವಿಭಾಗ ಪತ್ರದ ಆಧಾರದ ಮೇಲೆ ದಾವಾ ಷೆಡ್ಯೂಲ್ ಅಸ್ತಿಯ ಮೇಲೆ ಯಾವುದೇ ಹಕ್ಕನ್ನು ಪ್ರತಿಪಾದಿಸುವುದಿಲ್ಲವೆಂದು ಪ್ರತಿವಾದಿ ಮುಕ್ತಸಮ್ಮತಿಯಿಂದ ಒಪ್ಪಿಕೊಂಡಿರುತ್ತಾರೆ.

ವಾದಿಯರು 4) ದಾವಾ ಷೆಡ್ಯೂಲ್ ಆಸ್ತಿಗೆ ಸಂಬಂಧಿಸಿದ ಕಂದಾಯ ದಾಖಲೆಗಳನ್ನ ಹೆಸರಿನಿಂದ ಪ್ರತಿವಾದಿಯ ವಾದಿಯರ ಹೆಸರಿಗೆ ಬದಲಾಯಿಸಿಕೊಳ್ಳಲು ಪ್ರತಿವಾದಿ ಒಪ್ಪಿಕೊಂಡಿರುತ್ತಾರೆ. ದಾವಾ ಷೆಡ್ಯೂಲ್ ಆಸ್ತಿಯಲ್ಲಿ

ವಾದಿಯರು ಹೊಂದಿರುವ ಸ್ವಾಧೀನತೆಗೆ ಪ್ರತಿವಾದಿ ಯಾವುದೇ ರೀತಿಯ ತೊಂದರೆ, ತಂಟೆ ತಕರಾರು ಉಂಟುಮಾಡುವುದಿಲ್ಲವೆಂದು ಒಪ್ಪಿಕೊಂಡಿರುತ್ತಾರೆ. ಮಾನ್ಯ ನ್ಯಾಯಾಲಯ ಮಂಜೂರು ಮಾಡುವ ಡಿಕ್ರಿಯಂತೆ ಕಂದಾಯ ದಾಖಲಾತಿಗಳನ್ನ ವಾದಿಯರ ಹೆಸರಿಗೆ ಬದಲಾಯಿಸಿಕೊಳ್ಳಲು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳ ಮುಂದೆ ಸಂಪೂರ್ಣ ಹಕ್ಕುಳ್ಳವರಾಗಿದ್ದು, ಪ್ರತಿವಾದಿಯರ ಸಹಿ ಅವಶ್ಯಕತೆ ಇದೆ ಎಂದು ಸಂಬಂಧಪಟ್ಟ ಅಧಿಕಾರಿಗಳು ಕೇಳಿದಾಗ ಪ್ರತಿವಾದಿ ಸಹಿ ಮಾಡಿಕೊಡುವುದಾಗಿ ಒಪ್ಪಿಕೊಂಡಿರುತ್ತಾರೆ. ಮುಂದೆ ಏನಾದರೂ ಪ್ರತಿವಾದಿ ಸಹಿ ಮಾಡಿಕೊಡುವುದಕ್ಕೆತಂಟೆ-ತಕರಾರು ಉಂಟುಮಾಡಿದ್ದಲ್ಲಿ ಪ್ರತಿವಾದಿಯ ಸಹಿ ಅವಶ್ಯಕತೆ ಇಲ್ಲವೆಂದು ಸಂಬಂಧಪಟ್ಟ ಕಂದಾಯ ಅಧಿಕಾರಿಗಳು ಷೆಡ್ಯೂಲ್ ಅಸ್ತಿಯನ್ನ ವಾದಿಯರ ಹೆಸರಿಗೆ ಬದಲಾಯಿಸಿಕೊಳ್ಳಲು ಸಂಪೂರ್ಣ ಹಕ್ಕುಳ್ಳವರಾಗಿದ್ದು, ಅದೇ ರೀತಿ ಅಧಿಕಾರಿಗಳು ಪ್ರತಿವಾದಿಯ ಸಹಿ ಅವಶ್ಯಕತೆ ಇಲ್ಲವೆಂದು ಖಾತೆ ವರ್ಗಾವಣೆ ಮಾಡುವುದಕ್ಕೆ ಹಕ್ಕುಳ್ಳವರಾಗಿರುತ್ತಾರೆ ಎಂದು ಪ್ರತಿವಾದಿ ಮುಕ್ತ ಸಮ್ಮತಿಯಿಂದ ಒಪ್ಪಿಕೊಂಡಿರುತ್ತಾರೆ.

5) ವಾದಿಯರು ಮತ್ತು ಪ್ರತಿವಾದಿ ಈ ದಾವೆಯನ್ನ ಮುಕ್ತ ಸಮ್ಮತಿಯಿಂದ ರಾಜಿ ಮಾಡಿಕೊಂಡಿರುತ್ತಾರೆಯೇ ಹೊರತು ಯಾವುದೇ ರೀತಿಯ ಒತ್ತಾಯ, ಪ್ರೇರಣೆ ಮತ್ತು ತಪ್ಪು ಕಲ್ಪನೆಯಿಂದ ಮಾಡಿಕೊಂಡಿರುವುದಿಲ್ಲ. ಈ ರಾಜೀ ಪತ್ರದಲ್ಲಿ ನಮೂದಿಸಿರುವ ಎಲ್ಲಾ ಅಂಶಗಳನ್ನ ವಾದಿಯರು ಮತ್ತು ಪ್ರತಿವಾದಿಯು ಅರ್ಥಮಾಡಿಕೊಂಡು, ತಿಳಿದುಕೊಂಡು ಮುಕ್ತ ಸಮ್ಮತಿಯಿಂದ ಉಭಯಪಕ್ಷಗಾರರು ರಾಜೀ ಮಾಡಿಕೊಂಡಿರುತ್ತಾರೆ.

**:: ಆದೇಶ ::**

ವಾದಿಯರು ದಾಖಲು ಮಾಡಿರುವ ಈ ದಾವೆಯನ್ನು ಜಂಟಿ ರಾಜಿ ಅರ್ಜಿಯ ಮುಖೇನ ವಿಲೇವಾರಿ ಮಾಡಲಾಗಿದೆ. ಜಂಟಿ ರಾಜಿ ಅರ್ಜಿಯು ತೀರ್ಪಿನ ಒಂದು ಭಾಗವಾಗಿರುತ್ತದೆ. ಅದರಂತೆ ಡಿಕ್ರಿಯನ್ನು ಬರೆಯಿರಿ.

**(ಶ್ರೀಮತಿ.ಸುಷ್ಮಾ.ಸಿ.)**
1 ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಲಯ, ಕೆ.ಆರ್.ಪೇಟೆ.